ರಾಗ : ಸೌರಾಷ್ಟ್ರ ತಾಳ – ಆದಿತಾಳ

ನಾರಾಯಣನ ನೆನೆ ನೀ । ಪ ।

ನಾರಾಯಣನ ಮನ್ನಿಸು ವರ್ಣಿಸು
ಆರಾಧನೆಗಳ ಮಾಡುತ ಪಾಡುತ
ನೀರಾಜನದಿಂದ ಅರ್ಚಿಸು ಮೆಚ್ಚಿಸು ಪಾರಾಯಣಪ್ರಿಯನ । ಅ.ಪ ।

ಅವನ ಶ್ರವಣಮನನನಿಧಿಧ್ಯಾಸನ
ಆವಿಷ್ಣುವಿನ ಭಕ್ತಿ ಮಹಪ್ರಸಾದಂಗಳು
ಕೈವಲ್ಯಪದಕೆ ಇಕ್ಕಿದ ನಿಚ್ಚಣಿಕೆಯೆಂದೆ ಭಾವಜ್ಞರು ಪೇಳ್ವರು
ಜೀವನೆ ಜವನ ಭಾಧೆಗಳನ್ನು ತಪ್ಪಿಸಿ
ಪಾವನ ವೈಕುಂಠಪುರದೊಳಗೆಂದೆಂದು
ಆವಾಸವನು ಮಾಡಿ ಸುಖಿಸಬೇಕಾದರೆ ಸೇವಿಸು ವೈಷ್ಣವರ । ೧ ।

ಲೋಕದಿಂ 'ವರಂ ವರಯ ಭದ್ರಂ ತೇ
ಋತೇ ಕೈವಲ್ಯಮಾತ್ಮನ:
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯ:' ಎಂಬ
ಈ ಕಲಿಯುಗದಲ್ಲಿ ಬೇಕಾದ ಪುರಾಣ
ವಾಕು ವಿವೇಕದಿ ಮನದಿ ವಿಚಾರಿಸಿ
ಸ್ವೀಕರಿಸು ವೈಷ್ಣವರ ಮತವ ನಿರಾಕರಿಸನ್ಯಮತವ । ೨ ।

ದ್ವಾರಾವತಿಯ ಗೋಪೀಚಂದನದಿಂದ
ಶ್ರೀರಮಣನ ವರನಾಮವ ನೆನೆದೆರ–
ಡಾರು ಊರ್ಧ್ವಪುಂಡ್ರಗಳ ಧರಿಸೆಂದೆಂದು ವೀರವೈಷ್ಣವಗುರುವ
ಸೇರಿಸಂತಪ್ತಸುದರುಶನ ಶಂಖವ

ಧಾರಣವನು ಭುಜಯುಗದೊಳು ಮಾಡಿ
ಮುರಾರಿಯ ಮಂತ್ರಗಳವರಿಂದಲಿ ಕೇಳಿ ಓರಂತೆ ಜಪಿಸುತಲಿ ।೩।

ಕಂದ ಬಾರೆಂದರೆ ನಂದನಿಗೊಲಿದಿಹ
ಕುಂದುಕೊರತೆ ಬಂದರೆ ನೊಂದುಕೊಳ್ಳನು
ಇಂದಿರೆಯರಸ ಮುಕುಂದನೆ ಮುಕುತಿಯಾನಂದವನೀವ ದೇವ
ಸಂದೇಹವಿಲ್ಲದೆ ಒಂದೆ ಮನದಿ
ಗೋವಿಂದನ ನೆನೆದ ಗಜೇಂದ್ರನಿಗೊಲಿದ
ಉಪೇಂದ್ರನ ಶುಭಗುಣಸಾಂದ್ರನ ಯದುಕುಲಚಂದ್ರನ ವಂದಿಸಿರೋ ।೪।

ತುಷ್ಟನಹನು ಎಳ್ಳಷ್ಟು ಮುಂದಿಟ್ಟರೆ
ಅಷ್ಟಿಷ್ಟು ಎನ್ನದೆ ಸಕಲೇಷ್ಟಂಗಳ
ಕೊಟ್ಟು ಕಾವನು ಶಕ್ರನಿಗೆ ತ್ರಿವಿಷ್ಟಪ ಪಟ್ಟವ ಗಟ್ಟಿದವ
ನಿಷ್ಠುರನಲ್ಲ ವಿಶಿಷ್ಟರಿಗೊಲಿದಿಹ
ದುಷ್ಟರ ತರಿದಟ್ಟಿದ ಜಗಜಟ್ಟಿ
ಅರಿಷ್ಟ ಮುಷ್ಟಿಕಾದ್ಯರ ಹುಡಿಗುಟ್ಟಿದ ವಿಠಲ ಬಲು ದಿಟ್ಟ ।೫।

ಅವನ ಪಕ್ಷ ಬಲಕ್ಕಿದಿರಿಲ್ಲ ಕೇ-
ಶವನ ಕುಕ್ಷಿಯೊಳಕ್ಕು ಜಗತ್ರಯ
ಅವನು ರಕ್ಷಿಪ ಶಿಕ್ಷಿಪನೋ ಮತ್ತಾವನು ಪಾವನನೋ
ಅವನ ಶಿಕ್ಷೆಗೆ ಮಿಕ್ಕವರಿಲ್ಲ ಕೇ-
ಶವನುಪೇಕ್ಷೆ ಕುಲಕ್ಷಯವೆನಿಪುದು
ಅವನುರುಕ್ರಮ ವಿಕ್ರಮನೆನಿಸಿದಾ ದೇವನಿಗಾವನೆಣೆ ।೬।

ಓಡುವ ಅಡಗುವ ದೇವರೆ ಬಲ್ಲರು
ಕೂಡುವ ನೋಡುವ ಮುಕುತರೆ ಬಲ್ಲರು
ಬೇಡುವ ಮುನಿಗಳೆ ಬಲ್ಲರು ಅವನೊಡನಾಡುವ ರಮೆ ಬಲ್ಲಳು
ಊಡುವ ಪಾಡುವ ಯಶೋದೆ ಬಲ್ಲಳು
ಕಾಡುವ ಖೂಳರ ಆಡು ಕೆಡಹಿದ
ನಾಡೊಳು ಶರಣರ ಕೇಡು ಕಳೆವ ಕೃಷ್ಣ-ಗೀಡೆನ್ನದಿರು ಮೂಢ । ೭ ।

ಹರಿನಿರ್ಮಾಲ್ಯವ ಶಿರಧಿ ಧರಿಸುತಿರು
ಹರಿನೈವೇದ್ಯವ ಭುಂಜುಸುತಿರು ನಿತ್ಯ
ಇರುಳು ಹಗಲು ಹರಿಸ್ಮರಣೆಯ ಬಿಡದುರು ದುರುಳರ ಕೂಡದಿರು
ಹರಿಪದ ತೀರಥ ನೇಮವ ಬಿಡದಿರು
ಹರಿಪರದೇವತೆಯೆಂದರುಪುತಲಿರು
ಗುರುಮುಖದಿಂದ ಸಚ್ಛಾಸ್ತ್ರಪುರಾಣವ ನಿರುತದಿ ಕೇಳುತಿರು । ೮ ।

ಸಿರಿದೇವಿಯಾವನಿಗರಿಸಿ ಸುರರ ಗುರು
ವಿರಿಂಚಿಪವನರು ಅವನ ಕುವರರು
ಉರಗಾಧಿಪನಾವನ ಮಂಚ ವಿಹಗೇಶ್ವರನಾವನ ವಾಹನ
ಪುರಹರನಾವನುಂಗುಟನೀರ ಪೊತ್ತನಿ-
ರ್ಜರಪತಿ ಯಾವನ ಚರಣಸೇವಕನಾದ
ಸುರರೊಳಗಾ ಹಯವದನಗಿನ್ನಾರನು ಸರಿಯೆಂದುಸುರುವೆನೈಯ್ಯ । ೯ ।
ನಾರಾಯಣನ ನೆನೆ ನೀ

ರಾಗ – ಕಾನಡ ತಾಳ – ಆದಿತಾಳ

ಬಾರೊ ಮುರಾರಿ ಬಾಲಕ ಶೌರಿ

ಸಾರ ವಿಚಾರಿ ಸಂತೋಷಕಾರಿ । ಪ ।

ಆಟ ಸಾಕೇಳೊ ಮೈಯೆಲ್ಲ ಧೂಳೊ

ಊಟಮಾಡೇಳೋ ಕೃಷ್ಣ ಕೃಪಾಳೊ । ೧ ।

ಅರುಣಾಬ್ಜಚರಣ ಮಂಜುಳಾಭರಣಾ

ಪರಮವಿತರಣ ಪನ್ನಂಗಶಯನ । ೨ ।

ಅರವಿಂದನಯನ ಶರದೇಂದುವದನ

ವರಯದುಸದನ ಸಿರಿ ಹಯವದನ । ೩ ।

ರಾಗ – ಶಂಕರಾಭರಣ

ಹಣವೇ ನಿನ್ನಯ ಗುಣವೆಂತು ವರ್ಣಿಸಲಿ

ಹಣವಿಲ್ಲದವನೊಬ್ಬ ಹೆಣಕಿಂತ ಕಡೆಯಯ್ಯ । ಪ ।

ಬೆಲೆಯಾಗದನ್ನೆಲ್ಲ ಬೆಲೆಯ ಮಾಡಿಸುವಿ

ಎಲ್ಲಾ ವಸ್ತುಗಳನೀನಿದ್ದಲ್ಲೇ ತರಿಸುವಿ

ಕುಲಗೆಟ್ಟವರ ಸತ್ಕುಲಕೆ ಸೇರಿಸುವಿ

ಹೊಲೆಯನಾದರು ತಂದು ಒಳಗೆ ಸೇರಿಸುವೆ । ೧ ।

ಅಂಗನೆಯರ ಸಂಗವನು ಮಾಡಿಸುವಿ

ಶೃಂಗಾರಾಭರಣಂಗಳ ತರಿಸುವಿ

ಮಂಗನಾದರು ಅನಂಗನೆಂದೆನಿಸುವಿ

ಕಂಗಳಿಲ್ಲದವಂಗೆ ಮಗಳ ಕೊಡಿಸುವಿ । ೨ ।

ಹರಣಕ್ಕೆ ಬಂದಂಥ ದುರಿತವ ಬಿಡಿಸುವಿ

ಸರುವರಿಗೆ ಶ್ರೇಷ್ಟನರನೆನಿಸುವಿ

ಅರಿಯದ ಸುಂಠನ್ನ ಅರಿತವನೆನಿಸುವಿ
ಸಿರಿಹಯವದನನ ಸ್ಮರಣೆ ಮರೆಸುವಿ ।೩।

ರಾಗ – ಕಾನಡ ತಾಳ – ಆದಿತಾಳ
ಬಾರೊ ಮುರಾರಿ ಬಾಲಕ ಶೌರಿ
ಸಾರ ವಿಚಾರಿ ಸಂತೋಷಕಾರಿ ।ಪ।
ಆಟ ಸಾಕೇಳೊ ಮೈಯೆಲ್ಲ ಧೂಳೊ
ಊಟಮಾಡೇಳೋ ಕೃಷ್ಣ ಕೃಪಾಳೊ ।೧।
ಅರುಣಾಬ್ಜಚರಣ ಮಂಜುಳಾಭರಣಾ
ಪರಮವಿತರಣ ಪನ್ನಂಗಶಯನ ।೨।
ಅರವಿಂದನಯನ ಶರದೇಂದುವದನ
ವರಯದುಸದನ ಸಿರಿ ಹಯವದನ ।೩।

ರಾಗ – ಶಂಕರಾಭರಣ – ತಾಳ – ರೂಪಕತಾಳ
ರಾಜಬೀದಿಯೊಳಗಿಂದ ಕಸ್ತೂರಿರಂಗ
ತೇಜನೇರಿ ಮೆರೆದು ಬಂದ । ಪ ।

ಸುತ್ತಮುತ್ತಲು ಸಾವಿರಾರು ಸಾಲು ದೀವಿಗೆ
ಹತ್ತು ದಿಕ್ಕಿಲಿ ಬೆಳಗುತ್ತಿದ್ದ ಹಗಲುಬತ್ತಿಯು
ವಿಸ್ತರದಿ ಭೂಸುರರು ಸುತ್ತುಗಟ್ಟಿ ನಿಂತಿರಲು
ಮತ್ತೆ ನವ್ಮೊಳೆಂತು ತೀಜಿ ಮೆಲ್ಲನೆ ನಡೆಸುತ ಜಾಣ ।೧।

ತಾಳ ಶಂಖ ಭೇರಿ ತಂಬೂರಿ ಮೊದಲಾದ
ಮೇಲುಪಂಚ ಕಂಗಳೆಲ್ಲಾ ಮಿಗೆ ಪೊಗಳಲು
ಗಾಳಿ ಗೋಪುರದ ರಾಯ ಬಿಡದಂತೆ ಸುತ್ತ
ಧೂಳುಗಳೆಬ್ಬಿಸಿ ವೈಹಾಳಿನಿಕ್ಕುತ ಜಾಣ ।೨।

ವೇದ ಘೋಷದಿಂದ ವಿಪ್ರರು ಸ್ತುತಿಸಲು
ಮೋದದಿಂದ ಗಾಯಕರು ಹಾಡಿ ಪಾಡಲು
ಹಾದಿ ಬೀದಿಯಲ್ಲಿ ನಿಂತ ಭೂಸುರ ಜನರಿಗೆಲ್ಲ
ಆದರದಿಂದಿಷ್ಟಾರ್ಥವಿತ್ತು ಮೋದದಿಂದ ಮನ್ನಿಸುವ ।೩।

ರಂಭೆ ಮೊದಲಾದ ಸುರರಮಣಿಯರು
ತುಂಬಿದಾರತಿಯೆತ್ತಿ ಕೂಡಿ ಪಾಡಲು
ಶಂಭುಮುಖನಿರ್ಜರಾನೀಕ ಪರಾಕೆನುತ
ಅಂಬುಜಭವಾದಿಗಳ ಆಳಿದ ಶ್ರೀರಂಗಧಾಮ ।೪।

ಹಚ್ಚನೆ ಹೆಸರುಬೇಳೆ ಹಾಲು ಕೆನೆಗಳು
ಮುಚ್ಚಿ ತಂದ ಕೆನೆ ಮೊಸರು ಮೀಸಲು ಬೆಣ್ಣೆಯು
ಅಚ್ಚತುಪ್ಪದಿ ಪಕ್ವವಾದ ಅತಿರಸಹುಗ್ಗಿಯನ್ನು ಮೆಚ್ಚಿ
ಉಂಡು ಪಾನಕನೀರುಮಜ್ಜಿಗೆಗಳನೆ ಕುಡಿದು ।೫।

ಮುತ್ತಿನ ತುರಾಯಿ ಅಂಗಿ ಮುಂಡಾಸು
ತತ್ಥಳಿಪ ಪಜ್ರಕೆಂಪಿನತಾಳಿ ಚೌಕಳಿ
ಮುತ್ತಿನ ಕುಂಡಲನಿಟ್ಟು ಮೋಹಿಸುತ್ತ ಬೀದಿಯೊಳು
ಕತ್ತಿನ ಉಡಿಯಲ್ಲಿ ಕಟ್ಟಿ ಕೈಯಲ್ಲಿ ಪಿಡಿದು ।೬।

ಸಣ್ಣ ಮುತ್ತು ಕೆತ್ತಿಸಿದ ಸಕಲಾತಿಗೊಂಡ್ಯ
ಹೊನ್ನತೆತ್ತಿಸಿದ ಹೊಸ ಹೊಳೆವ ಸೊಬಗಿನ
ಉನ್ನಂತ ಗುಣರಾಯನುತ್ತಮರಾಜಾಶ್ವವೇರಿ
ಎನ್ನ ಹಯವದನ ರಂಗ ಎಲ್ಲರಿಗಿಷ್ಟಾರ್ಥ ಕೊಡುತ ।೭।

ರಾಗ – ನಾಟಿ          ತಾಳ – ಆಟ

ಅಹುದಹುದು ಹನುಮಂತ ಅಹುದು ನೀ ಬಲವಂತ
ಅಹುದು ಮುಖ್ಯಪ್ರಾಣ ಮೂಲಗುರು ಅಹುದೋ ।ಪ।
ಅಂಜನೆಯ ಗರ್ಭದಲಿ ಅಂದು ಜನಿಸಿದೆ ನೀನು
ಸಂಜೀವನ ತಂದೆ ಸಕಲಕಪಿಗಳಿಗೆ
ಅಂಜದಲೆ ನೀಪೋಗಿ ಶರಧಿಯನೆ ನೆರೆದಾಟಿ
ಕಂಜಾಯತಾಕ್ಷಿಗುಂಗುರವಿತ್ತ ಹನುಮ । ।೧।
ಕುಂತಿಯ ಗರ್ಭದಲಿ ಉದ್ಭವಿಸಿದೆಯೊ ನೀನು
ಪಂಥಗಳನಾಡಿ ದಾಯಾದ್ಯರೊಡನೆ
ಕಂತುಪಿತನನು ಸೇರಿ ಕೌರವರ ಬಲಸವರಿ
ಸಂತೋಷದಲಿ ರಾಜ್ಯ ಕೈಗೊಂಡೆ ಭೀಮ ।೨।
ಮಧ್ವಾವತಾರದಲಿ ಮುನಿವೇಷವನು ತಾಳಿ
ಅದ್ವೈತವೆಂಬರಣ್ಯವನು ತರಿದೆ
ಮಧ್ವಶಾಸ್ತ್ರವ ಮಾಡಿ ಮತವನುದ್ಧರಿಸಿದೆ
ಮುದ್ದು ಶ್ರೀಹಯವದನದಾಸ ನಿರ್ದೋಷ ।೩।

---

ರಾಗ – ಪಂತುವರಾಳಿ    ತಾಳ – ರೂಪಕತಾಳ

ಒಂದು ಬಾರಿ ಸ್ಮರಣೆ ಸಾಲದೆ ।ಪ।
ಆನಂದತೀರ್ಥರ ಪೂರ್ಣಪ್ರಜ್ಞರ ಸರ್ವಜ್ಞರಾಯರ ಮಧ್ವರಾಯರ ।ಅ.ಪ।

ಹಿಂದನೇಕ ಜನ್ಮಗಳಲ್ಲಿ ನೊಂದು ಯೋನಿಗಳಲಿ ಬಂದು
ಇಂದಿರೇಶನ ಹರಿಯ ಪಾದವ ಹೊಂದಬೇಕೆಂಬುವರಿಗೆ ।೧।
ಪ್ರಕೃತಿಬಂಧನದಲ್ಲಿ ಸಿಲುಕಿ ಸಕಲವಿಷಯಗಳಲಿ ನೊಂದು
ಅಕಳಂಕಚರಿತ ಹರಿಯ ಪಾದಭಕುತಿ ಬೇಕೆಂಬುವರಿಗೆ ।೨।
ಆರುಮಂದಿ ವೈರಿಗಳನು ಸೇರಿಸಲೀಸದಂತೆ ಜರಿದು
ಧೀರನಾಗಿ ಹರಿಯ ಪಾದವ ಸೇರಬೇಕೆಂಬುವರಿಗೆ ।೩।
ಘೋರಸಂಸಾರಾಂಬುಧಿಗೆ ಪರಮಜ್ಞಾನವೆಂಬ ವಾಡೆ
ಏರಿ ಮೆಲ್ಲನೆ ಹರಿಯ ಪಾದ ಸೇರಬೇಕೆಂಬುವರಿಗೆ ।೪।
ಹೀನಬುದ್ಧಿಯಿಂದಿ ಶ್ರೀಹಯವದನನ್ನ ಜರಿದು
ತಾನು ಬದುಕಲರಿಯದಿರಲು ತೋರಿ ಕೊಟ್ಟ ಮಧ್ವಮುನಿಯು ।೫।

ರಾಗ – ಆನಂದಭೈರವಿ ತಾಳ – ಆದಿತಾಳ

ಬೇಗ ಬಾರೋ ಬೇಗ ಬಾರೋ ನೀಲಮೇಘವರ್ಣ
ಬೇಗ ಬಾರೋ ಬೇಗ ಬಾರೋ ವೇಲಾಪುರದ ಚೆನ್ನ ।ಪ।
ಇಂದಿರೇರಮಣ ಗೋವಿಂದ ಬೇಗ ಬಾರೋ
ನಂದನಕಂದ ಮುಕುಂದ ಬೇಗ ಬಾರೋ ।೧।
ಧೀರ ಉದಾರ ಗಂಭೀರ ಬೇಗ ಬಾರೋ
ಹಾರಾಲಂಕೃತ ರಘುವೀರ ಬೇಗ ಬಾರೋ ।೨।
ರಂಗ ಉತ್ತುಂಗ ನರಸಿಂಗ ಬೇಗ ಬಾರೋ
ಗಂಗೆಯನು ಪಡೆದ ಪಾಂಡುರಂಗ ಬೇಗ ಬಾರೋ ।೩।
ಋದ್ಧ ಸಮೃದ್ಧ ಅನಿರುದ್ಧ ಬೇಗ ಬಾರೋ
ಹದ್ದನೇರಿದ್ದ ಪ್ರಸಿದ್ಧ ಬೇಗ ಬಾರೋ ।೪।
ಅಯ್ಯಾ ವಿಜಯ್ಯ ಸಾಹಯ್ಯ ಬೇಗ ಬಾರೋ ।
ಅಹಿಯಾದ್ರಿವಾಸ ಹಯವದನ ಬೇಗ ಬಾರೋ ।೫।

"ಕೃಷ್ಣಾರ್ಪಣಮಸ್ತು"